# ಆಪಸ್ತಂಬ ಧರ್ಮಸೂತ್ರ

## ಸವಿಮರ್ಶ ಅಧ್ಯಯನ

ಮೈಸೂರು ವಿಶ್ವವಿದ್ಯಾನಿಲಯದ
ಡಾಕ್ಟರ್ ಆಫ್ ಫಿಲಾಸಫಿ
ಪದವಿಗಾಗಿ ಸಲ್ಲಿಸಿದ ಪ್ರೌಢಪ್ರಬಂಧ

ಮಹಾಬಲೇಶ್ವರ
ಸಂಸ್ಕೃತ ಉಪನ್ಯಾಸಕ
ಸರ್ ಎಂ. ವಿಶ್ವೇಶ್ವರಾಯ ವಿಜ್ಞಾನ ಕಾಲೇಜು
ಭದ್ರಾವತಿ

1992

## ಮಾರ್ಗದರ್ಶಕರ ಶಿಫಾರಸು ಪತ್ರ

ಶ್ರೀ ಮಹಾಬಲೇಶ್ವರ, ಸಂಸ್ಕೃತ ಉಪನ್ಯಾಸಕ, ಸರ್ ಎಂ.ವಿ. ವಿಜ್ಞಾನ ಕಾಲೇಜು, ಭದ್ರಾವತಿ, ಇವರು ನನ್ನ ಮಾರ್ಗದರ್ಶನದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಡಾಕ್ಟರ್ ಆಫ್ ಫಿಲಾಸಫಿ ಪದವಿಗಾಗಿ 'ಆಪಸ್ತಂಬ ಧರ್ಮಸೂತ್ರ—ಸವಿಮರ್ಶ ಅಧ್ಯಯನ' ಈ ವಿಷಯವನ್ನು ಕುರಿತು ಸಂಶೋಧನೆ ನಡೆಸಿ, ಈ ಪ್ರೌಢ ಪ್ರಬಂಧವನ್ನು ಸಿದ್ಧಪಡಿಸಿರುತ್ತಾರೆ. ಅವರು ಈ ಪ್ರೌಢಪ್ರಬಂಧವನ್ನು ಈ ಮೊದಲು ಭಾಗಶಃ ಆಗಲೀ ಪೂರ್ಣವಾಗಿಯಾಗಲೀ ಈ ವಿಶ್ವವಿದ್ಯಾನಿಲಯ ಅಥವಾ ಬೇರಾವ ವಿಶ್ವವಿದ್ಯಾನಿಲಯದ ಯಾವುದೇ ಡಿಗ್ರಿ, ಡಿಪ್ಲಮೋಗಳಿಗಾಗಲೀ ಅಥವಾ ಇತರ ಯಾವುದೇ ಪದವಿ ಪರೀಕ್ಷೆಗಳಿಗಾಗಲೀ ಒಪ್ಪಿಸಿಲ್ಲ.

ಮೈಸೂರು
ದಿನಾಂಕ: 17/1/92

Dr. R.S. Shivaganesha Murthy
Professor, Dept. of Sanskrit,
Manasagangotri, MYSORE-6

## ಪ್ರಮಾಣ ಪತ್ರ

'ಆಪಸ್ತಂಬ ಧರ್ಮಸೂತ್ರ — ಸವಿಮರ್ಶ ಅಧ್ಯಯನ' ಈ ಶೀರ್ಷಿಕೆಯ ಪ್ರೌಢ ಪ್ರಬಂಧವನ್ನು ನಾಲ್ಕು ವರ್ಷಗಳ ನನ್ನ ಅಧ್ಯಯನ ಮತ್ತು ಸಂಶೋಧನೆಯ ಫಲವಾಗಿ ಬರೆದು ಸಿದ್ಧಪಡಿಸಿರುತ್ತೇನೆ. ಇದನ್ನು ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ಸಂಸ್ಕೃತ ವಿಭಾಗದ ಪ್ರಾಧ್ಯಾಪಕರಾದ ಡಾ. ಶಿವಗಣೇಶಮೂರ್ತಿ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತೇನೆ. ಈ ಪ್ರೌಢಪ್ರಬಂಧವನ್ನು ಈ ಮೊದಲು ಭಾಗಶಃ ಆಗಲೀ, ಪೂರ್ಣವಾಗಿಯಾಗಲೀ ಈ ವಿಶ್ವವಿದ್ಯಾನಿಲಯ ಅಥವಾ ಬೇರಾವ ವಿಶ್ವವಿದ್ಯಾನಿಲಯದ ಯಾವುದೇ ಡಿಗ್ರಿ, ಡಿಪ್ಲೊಮಾಗಳಿಗಾಗಲೀ ಅಥವಾ ಇತರ ಯಾವುದೇ ಪದವಿ ಪರೀಕ್ಷೆಗಳಿಗಾಗಲೀ ಒಪ್ಪಿಸಿಲ್ಲ ಎಂಬುದಾಗಿ ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ: 17-1-1992

ಮಹಾಬಲೇಶ್ವರ
ಉಪನ್ಯಾಸಕರು
ಸರ್ ಎಂ.ವಿ. ವಿಜ್ಞಾನ ಕಾಲೇಜು,
ಭದ್ರಾವತಿ.

# ಅರಿಕೆ

ಕಲ್ಪಸೂತ್ರಗಳ ನಾಲ್ಕು ಭಾಗಗಳೂ (ಶ್ರೌತ, ಗೃಹ್ಯ, ಧರ್ಮ, ಶುಲ್ಬ) ದೊರೆತಿರುವ ಕೆಲವೇ ಕಲ್ಪಸೂತ್ರಗಳಲ್ಲಿ ಆಪಸ್ತಂಬ ಕಲ್ಪಸೂತ್ರವೂ ಒಂದು. ಆಪಸ್ತಂಬ ಧರ್ಮಸೂತ್ರವು ಆಪಸ್ತಂಬ ಕಲ್ಪದ 28 ಮತ್ತು 29ನೇ ಪ್ರಶ್ನೆವಾಗಿದ್ದು ಕೃಷ್ಣಯಜುರ್ವೇದದ ತೈತ್ತಿರೀಯ ಶಾಖೆಗೆ ಸೇರಿದೆ. ಪ್ರಪ್ರಥಮವಾಗಿ ಬೂಹ್ಲರ್‌ರವರು ಆಪಸ್ತಂಬ ಧರ್ಮಸೂತ್ರವನ್ನು ಬಾಂಬೆ ಸಂಸ್ಕೃತ ಮಾಲೆಯಲ್ಲಿ ಪ್ರಕಟಿಸಿದರು (1868, 1871, ಕ್ರಿ.ಶ.). ಅನಂತರ ಅವರು ಹರದತ್ತನ ಉಜ್ವಲಾ ವೃತ್ತಿಯ ಆಯ್ದ ಭಾಗಗಳೊಂದಿಗೆ 'ಆಪಸ್ತಂಬೀಯ ಧರ್ಮಸೂತ್ರ' ಎಂಬ ಹೆಸರಿನಲ್ಲಿ ಪ್ರಕಟಿಸಿದರು. SBE ಮಾಲೆಯ ಎರಡನೇ ಸಂಪುಟದಲ್ಲಿ ಅವರ ಇಂಗ್ಲೀಷ್ ಅನುವಾದವು ಪ್ರಕಟವಾಯಿತು. (1879) ಹರದತ್ತನ ವ್ಯಾಖ್ಯಾನದಿಂದ ಕೂಡಿದ ಈ ಧರ್ಮಸೂತ್ರವನ್ನು ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನಾಲಯದವರು ಸಂಪಾದಿಸಿದ್ದಾರೆ (1898). ಹಾಗೆಯೇ ಎ.ಸಿ. ಶಾಸ್ತ್ರಿ ಮತ್ತು ಎ.ಆರ್. ಶಾಸ್ತ್ರಿಗಳು ಒಟ್ಟಿಗೆ 1932ರಲ್ಲಿ ಉಜ್ವಲಾ ವೃತ್ತಿಯೊಡನೆ ಚೌಖಾಂಬಾ ಸಂಸ್ಕೃತ ಮಾಲೆಯಲ್ಲಿ ಸಂಪಾದಿಸಿದ್ದಾರೆ. ಶ್ರೀ ಸೂರ್ಯನಾರಾಯಣ ರವರು ಆಪಸ್ತಂಬ ಧರ್ಮಸೂತ್ರ ಮಂಜರೀ ಎಂಬುದಾಗಿ ಈ ಧರ್ಮಸೂತ್ರವನ್ನು ವಿಷಯಾನುಕ್ರಮವಾಗಿ ಸಂಗ್ರಹಿಸಿದ್ದಾರೆ (1933). ಡಾ। ಉಮೇಶ ಚಂದ್ರ ಪಾಂಡೇಯ ರವರು ಹಿಂದೀ ವ್ಯಾಖ್ಯಾನದೊಡನೆ ಪ್ರಕಾಶಗೊಳಿಸಿದ್ದಾರೆ (1969).

ಈ ಪ್ರಕಾರವಾಗಿ ಆಪಸ್ತಂಬ ಧರ್ಮಸೂತ್ರದ ಬೇರೆ ಬೇರೆ ಸಂಪಾದಿತ ಗ್ರಂಥಗಳು ಪ್ರಕಟಗೊಂಡಿದ್ದರೂ, ಈ ಗ್ರಂಥದ ಆಮೂಲಾಗ್ರ ಪರಿಚಯವನ್ನು ತಿಳಿಸಿಕೊಡುವ ವಿಮರ್ಶಾತ್ಮಕ ಅಧ್ಯಯನವನ್ನು ಮಾಡಿ ಯಾರೂ ಮಹಾಪ್ರಬಂಧವನ್ನು ಸಿದ್ಧಪಡಿಸಿಲ್ಲ.

ಭದ್ರಾವತಿಯ ಸರ್ ಎಂ. ವಿಶ್ವೇಶ್ವರಾಯ ವಿಜ್ಞಾನಕಾಲೇಜಿನಲ್ಲಿ

ಸಂಸ್ಕೃತ ಉಪನ್ಯಾಸಕನಾಗಿರುವ ನನಗೆ ಕಾಲೇಜು ದಿನಗಳಿಂದಲೇ ಈ ಧರ್ಮಸೂತ್ರಗಳು ಇಂದಿನ ಸಾಮಾಜಿಕ ಸನ್ನಿವೇಶಗಳಿಗೆ ಎಷ್ಟು ಔಚಿತ್ಯಪೂರ್ಣವಾದುದು ಎಂಬುದನ್ನು ಕುರಿತು ಅಧ್ಯಯನ ಮಾಡಬೇಕೆಂಬ ಹಂಬಲವಿತ್ತು. ನನ್ನ ಅಭೀಪ್ಸೆ ಈಗ ನೆರವೇರಿದೆ. ಈ ಮಹಾಪ್ರಬಂಧದಲ್ಲಿ ಆಪಸ್ತಂಬ ಧರ್ಮಸೂತ್ರವನ್ನು ಕುರಿತು ವಿಸ್ತಾರವಾಗಿ ಚರ್ಚಿಸಲಾಗಿದೆ. ವಿಶೇಷವಾಗಿ ಇಂದಿನ ಸಾಮಾಜಿಕ ಪರಿಸ್ಥಿತಿಗಳಿಗನುಗುಣವಾಗಿ ಈ ಗ್ರಂಥದ ಪ್ರಸ್ತುತತೆಯನ್ನು ಗಮನದಲ್ಲಿಟ್ಟುಕೊಂಡು ಸಾಮಾನ್ಯವಾದ ವಿಮರ್ಶೆಯನ್ನು ಮಾಡುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ. 'ಅನುಕ್ತಂ ಅನ್ಯತೋ ಗ್ರಾಹ್ಯಂ' ಎಂಬ ಮೀಮಾಂಸಾ ನ್ಯಾಯದಂತೆ ಸಂದರ್ಭಾನುಸಾರವಾಗಿ ವೇದೋಪನಿಷತ್ತುಗಳಿಂದಲೂ, ಇತರ ಧರ್ಮಸೂತ್ರಗಳಿಂದಲೂ, ಸ್ಮೃತಿ ಪುರಾಣಗಳಿಂದಲೂ ವಿಚಾರಗಳನ್ನು ಸಂಗ್ರಹಿಸಿ ಸೂಕ್ತವಾಗಿ ಪ್ರಸ್ತಾಪಿಸಲಾಗಿದೆ.

ಆಪಸ್ತಂಬ ಧರ್ಮಸೂತ್ರದ ಸವಿಮರ್ಶೆ ಅಧ್ಯಯನದ ಫಲಶ್ರುತಿಯಾಗಿ, ಈ ಧರ್ಮಸೂತ್ರವು ಇಂದಿನ ಸಮಾಜಕ್ಕೂ ಅತ್ಯಂತ ಉಪಯುಕ್ತವಾಗಿದೆ ಎಂಬ ಅಂಶ ಮನವರಿಕೆಯಾಗಿದೆ. ನನ್ನ ಈ ದೃಷ್ಟಿಕೋನವನ್ನು ಈ ಮಹಾಪ್ರಬಂಧದಲ್ಲಿ ಸಾಕಷ್ಟು ಸಮರ್ಥಿಸಿಕೊಂಡಿದ್ದೇನೆಎಂದು ಭಾವಿಸುತ್ತೇನೆ. ಮಾಂಸ ಭಕ್ಷಣ ಇತ್ಯಾದಿ ವಿಷಯಗಳಲ್ಲಿ ಕೇವಲ ಸಮರ್ಥನೆಗಾಗಿಯೇ ಯಾವುದನ್ನೂ ಸಮರ್ಥಿಸಿಕೊಳ್ಳುವ ನೀರಸ ಚರ್ಚೆಯನ್ನು ಮಾಡಿಲ್ಲ. ಪುರಾತನವಾದುದೆಲ್ಲವೂ ಶ್ರೇಷ್ಠವೂ ಅಲ್ಲ, ನೂತನವಾದುದೆಲ್ಲವೂ ತ್ಯಾಜ್ಯವೂ ಅಲ್ಲ "ಸಂತ: ಪರೀಕ್ಷ್ಯ ಅನ್ಯತರದ್ಭಜಂತೇ" ಎಂಬ ವರಕವಿ ಕಾಳಿದಾಸನ ವಾಣಿಯಂತೆ, ಈ ಹಿನ್ನೆಲೆಯಲ್ಲಿ ಆಪಸ್ತಂಬ ಧರ್ಮಸೂತ್ರದ ಅಧ್ಯಯನ ಮಾಡಲಾಗಿದೆ.

ಪ್ರಾರಂಭದಲ್ಲಿ, ಗುರುಕುಲ ಪದ್ಧತಿಯಂತೆ ಶಾಸ್ತ್ರೀಯವಾಗಿ ಮತ್ತು ಸಾಂಪ್ರದಾಯಿಕ ಶೈಲಿಯಲ್ಲಿ ಪಾಠಮಾಡಿ ವಿಷಯಜ್ಞಾನವನ್ನುಂಟು ಮಾಡಿದ ನನ್ನ ವಿದ್ಯಾಗುರುಗಳಾದ ವೇದಮೂರ್ತಿ ಶ್ರೀ ಶ್ರೀನಿವಾಸ ಅವಧಾನಿಗಳ ಚರಣಾರವಿಂದಗಳಿಗೆ ನಮಿಸುತ್ತೇನೆ.

ನಾನು ಸಂಶೋಧನೆಯನ್ನು ಕೈಗೊಳ್ಳಲು ಬಯಸಿದಾಗ ವಿಷಯವನ್ನು ಅನುಮೋದಿಸಿ ನನಗೆ ಮಾರ್ಗದರ್ಶನವನ್ನು ಮಾಡಲು ಒಪ್ಪಿದವರು ಸಂಸ್ಕೃತ ಪ್ರಾಧ್ಯಾಪಕರಾದ ಡಾ। ಶಿವಗಣೇಶ ಮೂರ್ತಿ. ಎಂ.ಎ. ಪಿ.ಹೆಚ್.ಡಿ. ಇವರು ಮೈಸೂರಿನ ಮಾನಸಗಂಗೋತ್ರಿಯ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನ ವಿಭಾಗದ ಅಧ್ಯಕ್ಷರೂ, ಪ್ರಾಧ್ಯಾಪಕರೂ ಮತ್ತು ಪ್ರಾಚ್ಯವಿದ್ಯಾ ಸಂಶೋಧನಾಲಯದ ನಿರ್ದೇಶಕರೂ ಆಗಿರುತ್ತಾರೆ. ನನಗೆ ಪ್ರಸ್ತುತ ಈ ಮಹಾಪ್ರಬಂಧದ ರಚನೆಯಲ್ಲಿ ಮಾರ್ಗದರ್ಶನ ಮಾಡುವ ಕಾರ್ಯಭಾರವನ್ನು ವಹಿಸಿ ಫಲಕಾರಿಯಾಗಲು, ತಮ್ಮ ಅಪಾರ ಅನುಭವದಿಂದ, ಅನೇಕ ಸೂಕ್ತ ಸಲಹೆಗಳನ್ನಿತ್ತು ತಮ್ಮ ಜ್ಞಾನಧಾರೆಯನ್ನು ಹರಿಸಿದ್ದಾರೆ. ಅವರ ದಕ್ಷ ಹಾಗೂ ಸಮರ್ಥ ಮಾರ್ಗದರ್ಶನದಿಂದ ನನ್ನೀ ಕಾರ್ಯವು ಯಶಸ್ವಿಯಾಗಿ, ಸುಲಭವಾಗಿ ಹಾಗೂ ಶೀಘ್ರವಾಗಿ ಮುಗಿಯುವಂತಾಯಿತು. ಈ ಉಪಕಾರಕ್ಕೆ ನಾನು ಆಚಾರ್ಯರಾದ ಡಾ। ಶಿವಗಣೇಶ ಮೂರ್ತಿಗಳಿಗೆ ಅತ್ಯಂತ ಕೃತಜ್ಞನಾಗಿರುತ್ತೇನೆ.

ನನ್ನ ಸಂಶೋಧನೆಯ ಕಾರ್ಯದಲ್ಲಿ ಸೂಕ್ತವಾದ ಅನೇಕ ಸಲಹೆಗಳನ್ನು ನೀಡುವುದರ ಮೂಲಕ ಸಹಕರಿಸಿದ ಮತ್ತು ಹೆಜ್ಜೆಹೆಜ್ಜೆಗೂ ಈ ಕಾರ್ಯಕ್ಕೆ ಪ್ರೋತ್ಸಾಹ ಮತ್ತು ಉತ್ತೇಜನ ನೀಡಿದವರು ಡಾ.ಕೆ.ಕೃಷ್ಣಮೂರ್ತಿಗಳು, ಪ್ರೊ. ಬಿ.ಕೆ.ಶಿವರಾಮಯ್ಯನವರು ಮತ್ತು ಸ್ನಾತಕೋತ್ತರ ಸಂಸ್ಕೃತ ವಿಭಾಗದ ಎಲ್ಲ ಪ್ರಾಚಾರ್ಯರು. ಇವರು ಮಾಡಿದ ಉಪಕಾರಗಳನ್ನು

ಸದಾ ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತೇನೆ.

ನನಗೆ ಬೇಕಾದ, ಆದರೆ ಇಲ್ಲಿ ದುರ್ಲಭವಾದ ಅನೇಕ ನಿಯತಕಾಲಿಕೆಗಳಲ್ಲಿರುವ ಲೇಖನಗಳ ಪ್ರತಿಗಳನ್ನು ಕಳುಹಿಸಿಕೊಟ್ಟು ಉಪಕರಿಸಿದವರು - ಪೂನಾದ ಡೆಕನ್ ಕಾಲೇಜಿನಲ್ಲಿ ಭಾಷಾಶಾಸ್ತ್ರದ ಪ್ರವಾಚಕರಾಗಿರುವ ಡಾ। ನಾಗರಾಜ್ ಮತ್ತು ಲಂಡನ್‌ನಲ್ಲಿರುವ ಭಾರತೀಯ ವಿದ್ಯಾಭವನದ ಸಾಂಸ್ಕೃತಿಕ ಚಟುವಟಿಕೆಗಳ ನಿರ್ದೇಶಕರಾಗಿರುವ ಡಾ। ನಂದಕುಮಾರ ರವರು. ಅಗತ್ಯ ಪುಸ್ತಕಗಳನ್ನು ಕೇಳಿದಾಗ ಒದಗಿಸಿದ ಮೈಸೂರಿನ ಡಾ। ಬಿ. ಚೆನ್ನಕೇಶವರವರು ಸಹಕರಿಸಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಗ್ರಂಥಾಲಯದ ಗ್ರಂಥಪಾಲಕರು ಮತ್ತು ಸಿಬ್ಬಂದಿವರ್ಗ, ಪ್ರಾಚ್ಯವಿದ್ಯಾ ಸಂಶೋಧನಾಲಯದ ಗ್ರಂಥಪಾಲಕರು ಮತ್ತು ಸಿಬ್ಬಂದಿವರ್ಗ, ಮತ್ತು ಸ್ನಾತಕೋತ್ತರ ಸಂಸ್ಕೃತ ವಿಭಾಗದ ಅಧ್ಯಾಪಕರು ಮತ್ತು ಸಿಬ್ಬಂದಿವರ್ಗ, ಇವರು ತಮ್ಮ ಗ್ರಂಥಭಂಡಾರವನ್ನು ಉಪಯೋಗಿಸಲು ನೆರವು ಮಾಡಿಕೊಟ್ಟಿದ್ದಾರೆ. ನನ್ನ ಮಹಾಪ್ರಬಂಧ ರಚನೆಗೆ ಸಹಾಯ ಮಾಡಿದ ಈ ಎಲ್ಲ ಮಹನೀಯರಿಗೂ ವಂದನೆಗಳನ್ನು ಸಲ್ಲಿಸುತ್ತೇನೆ. ನನ್ನ ಅಧ್ಯಯನಕ್ಕಾಗಿ ಉಪಯೋಗಿಸಿದ ಎಲ್ಲ ಗ್ರಂಥಗಳ ಹಾಗೂ ಲೇಖನಗಳ ಲೇಖಕರ ಉಪಕಾರಕ್ಕೆ ಕೃತಜ್ಞನಾಗಿದ್ದೇನೆ

ನನ್ನ ಸಂಶೋಧನಾ ಕಾರ್ಯದ ಪ್ರಾರಂಭದಿಂದಲೂ ಹೆಜ್ಜೆ ಹೆಜ್ಜೆಗೂ ಉತ್ತೇಜನ ನೀಡಿ ಪ್ರೋತ್ಸಾಹಿಸುತ್ತಿರುವ ಸರ್ ಎಂ. ವಿಶ್ವೇಶ್ವರಾಯ ಕಲಾ ಮತ್ತು ವಾಣಿಜ್ಯ ಕಾಲೇಜಿನ ಸಂಸ್ಕೃತ ವಿಭಾಗದ ಅಧ್ಯಕ್ಷರಾದ ಡಾ। ಸತ್ಯನಾರಾಯಣ ಶಾಸ್ತ್ರಿಗಳಿಗೂ, ಹಾಗೆಯೇ ಈ ಸಂಶೋಧನಾ ಕಾರ್ಯಕ್ಕೆ ಅನುಮತಿಯನ್ನು ನೀಡಿ ಪ್ರೋತ್ಸಾಹಿಸಿದ ನಮ್ಮ ಕಾಲೇಜಿನ ಪ್ರಾಚಾರ್ಯರಾದ ಪ್ರೊ। ಬಿ. ಕೃಷ್ಣಪ್ಪನವರಿಗೂ ನಾನು ಕೃತಜ್ಞನಾಗಿದ್ದೇನೆ.

ಹಾಗೆಯೇ ಮಹಾಪ್ರಬಂಧ ರಚನೆಯಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಲಹೆ ಸಹಕಾರಗಳನ್ನಿತ್ತು ಸಹಾಯ ಮಾಡಿದವರೆಲ್ಲರಿಗೂ ನನ್ನ ನಮಸ್ಕಾರಗಳನ್ನು ಅರ್ಪಿಸುತ್ತೇನೆ.

ಮಹಾಬಲೇಶ್ವರ.

# ವಿಷಯಾನುಕ್ರಮಣಿಕೆ


| ಅಧ್ಯಾಯಕ್ರ. | ವಿಷಯ | ಪುಟಕ್ರ. |
|---|---|---|
| | ಅರಿಕೆ | i |
| | ಉಪೋದ್ಘಾತ | viii |
| | ಸಂಕೇತಸೂಚಿ | xii |
| 1 | ಪ್ರಸ್ತಾವನೆ, ವೇದಗಳು, ವೇದಾಂಗಗಳು, ಶ್ರುತಿ-ಸ್ಮೃತಿ, ಧರ್ಮಸೂತ್ರ- ಧರ್ಮಶಾಸ್ತ್ರ, ಆಪಸ್ತಂಬ ಧರ್ಮಸೂತ್ರ- ಕರ್ತೃತ್ವ ವಿಚಾರ, ಶೈಲಿ, ವ್ಯಾಖ್ಯಾನಗಳು ಇತರ ಧರ್ಮಸೂತ್ರಗಳಿಗಿರುವ ಸಂಬಂಧ. | 1-48 |
| 2 | ಧರ್ಮ: ಋತ ಮತ್ತು ಯಜ್ಞದ ಸಂಬಂಧ, ಋತದ ನೈತಿಕ ಸ್ವರೂಪ, ಧರ್ಮ- ಧರ್ಮನ್, ಕಾಲಖಂಡದಲ್ಲಿ ಧರ್ಮದ ನಿರೂಪಣೆ, ಧರ್ಮದ ಲಕ್ಷಣ, ಮೂಲ, | 49-75 |
| 3 | ವರ್ಣಧರ್ಮ, ವಿವರಣೆ, ಮೂಲ, ವಿಕಾಸ, ಸೂತ್ರಕಾಲದಲ್ಲಿ ವರ್ಣವ್ಯವಸ್ಥೆ, ನಾಲ್ಕು ವರ್ಣಗಳು, ಕರ್ತವ್ಯಗಳು, ವರ್ಣಗಳ ಸ್ಥಾನಮಾನ, ಶೂದ್ರರ ಸ್ಥಿತಿಗತಿ, ಎಲ್ಲ ವರ್ಣಗಳ ಸಾಧಾರಣ ಧರ್ಮ | 76-104 |
| 4 | ಆಶ್ರಮ ಧರ್ಮ, ನಾಲ್ಕು ಆಶ್ರಮಗಳು, ವಿವರಣೆ, ಆಶ್ರಮಗಳು ಮತ್ತು ಪುರುಷಾರ್ಥ, ಆಶ್ರಮಗಳ ತಾರತಮ್ಯತೆ, ವಾನಪ್ರಸ್ಥ ಮತ್ತು ಪರಿವ್ರಾಜಕ. | 105-131 |
| 5 | ಬ್ರಹ್ಮಚರ್ಯಾಶ್ರಮ. ಉಪನಯನದ ವಯಸ್ಸು ಕಾಲ, ಸಮವಸ್ತ್ರ, ಬ್ರಹ್ಮಚಾರಿ ಧರ್ಮ, ಬ್ರಹ್ಮಚಾರಿಯ ನಡತೆ, ಅಭಿವಾದನ, ಆಚಾರ್ಯನಲ್ಲಿ ವಿದ್ಯಾರ್ಥಿಯ ನಡತೆ, ಆಚಾರ್ಯ, ಗುರುಶಿಷ್ಯರ ಸಂಬಂಧ, ದಂಡನೆ, ಗುರುಕುಲವಾಸದ ಅವಧಿ, ಶೈಕ್ಷಣಿಕ ಅವಧಿ, ಗುರುದಕ್ಷಿಣೆ, ಅನಧ್ಯಯನ ಉಪಸಂಹಾರ. ಸ್ನಾತಕ ಮತ್ತು ಅವನ ಕರ್ತವ್ಯಗಳು. | 132-194 |

| | | |
|---|---|---|
| 6 | ಗೃಹಸ್ಥಾಶ್ರಮ-I ಮಹತ್ವ ಮತ್ತು ಉದ್ದೇಶ, ನಿಯಮಗಳು ಮತ್ತು ಕರ್ತವ್ಯಗಳು, ಪತಿಪತ್ನಿಯರ ಸಂಬಂಧ, ನಿತ್ಯ ಜೀವನ, ಸ್ಥಾಲೀಪಾಕ, ಗೃಹಸ್ಥ ಮತ್ತು ಆಚಾರ್ಯರ ಸಂಬಂಧ, ಗೃಹಸ್ಥನಿಗೆ ಪುನಃ ಆಚಾರ್ಯಕುಲವಾಸ, ಗೃಹಸ್ಥನು ಆಚಾರ್ಯನಾದಾಗ, ಪಂಚಮಹಾಯಜ್ಞ. | 195 – 224 |
| 7 | ಗೃಹಸ್ಥಾಶ್ರಮ-II ಅತಿಥಿಸತ್ಕಾರ; ಮಧುಪರ್ಕ, ದಾನ, ಭೋಜ್ಯ-ಅಭೋಜ್ಯವಸ್ತುಗಳು, ಭೋಜನಕ್ರಮ, ಶುದ್ಧಿ - ಸ್ನಾನ, ಆಚಮನ, ಉಪಸ್ಪರ್ಶನ, ದ್ರವ್ಯಶುದ್ಧಿ ಶ್ರಾದ್ಧ - ವಿವಿಧ ಪ್ರಕಾರಗಳು, ಶ್ರಾದ್ಧನಿಯಮ. | 225 – 277 |
| 8 | ಆಪದ್ಧರ್ಮ ಮತ್ತು ಪ್ರಾಯಶ್ಚಿತ್ತ | 278 – 309 |
| 9 | ರಾಜಧರ್ಮ - ಆವಾಸ, ಪುರೋಹಿತ, ರಾಜನ ಕರ್ತವ್ಯಗಳು ವಿವಿಧ ವಿಭಾಗಗಳು, ತೆರಿಗೆ, ನ್ಯಾಯವ್ಯವಸ್ಥೆ, ನ್ಯಾಯ ತೀರ್ಮಾನ, ಸಾಕ್ಷಿ, ಪ್ರಜಾನೀತಿ, ದಾಯಭಾಗ, ವಿವಿಧ ಪುತ್ರರು. | 310 – 347 |
| 10 | ಕುಟುಂಬ ಜೀವನ ಮತ್ತು ಸ್ತ್ರೀ, ಸ್ತ್ರೀಯ ಸ್ಥಾನಮಾನ ವಿವಿಧ ವಿವಾಹ ಪದ್ಧತಿಗಳು, ವಿಧವಾ ವಿವಾಹ, ನಿಯೋಗ ಪದ್ಧತಿ, ಸ್ತ್ರೀಧನ. | 348 – 385 |
| 11 | ಮತಶ್ರದ್ಧೆ ಮತ್ತು ತತ್ತ್ವಜ್ಞಾನ | 386 – 394 |
| 12 | ಪ್ರಸ್ತುತತೆ | 395 – 449 |
| 13 | ಉಪಸಂಹಾರ | 450 – 457 |
| | ಟಿಪ್ಪಣಿಗಳು | 458 – 516 |
| | ಅನುಬಂಧ 1. ವೇದಮಂತ್ರಗಳ ಉಲ್ಲೇಖ | – 517 |
| | 2. ಪ್ರಾಚೀನ ಸೂತ್ರಕಾರರು ಮತ್ತು ಗ್ರಂಥಗಳ ಪಟ್ಟಿ | – 519 |
| | 3. ಶ್ಲೋಕಗಳ ಸೂಚೀ | – 521 |
| | 4. ಕೆಲವು ವಿಶೇಷ ಪದಗಳು | – 524 |
| | ಆಧಾರ ಸಾಹಿತ್ಯ ಸೂಚೀ | .527 – 545 |


— o —

# ಉಪೋದ್ಘಾತ

ಕಲ್ಪಸೂತ್ರಗಳು ವೇದಾಂಗಗಳಲ್ಲೊಂದು. ಇವು ಶ್ರೌತ, ಗೃಹ್ಯ, ಧರ್ಮ ಮತ್ತು ಶುಲ್ಬಸೂತ್ರಗಳೆಂದು ವಿಭಾಗಗೊಂಡಿದೆ. ಈ ನಾಲ್ಕು ವಿಭಾಗಗಳೂ ಉಪಲಬ್ಧವಾಗಿರುವ ಕಲ್ಪಸೂತ್ರಗಳು ಬಹಳ ವಿರಳ. ಆದರೆ ಆಪಸ್ತಂಬ ಕಲ್ಪಸೂತ್ರದ ಎಲ್ಲ ವಿಭಾಗಗಳು ದೊರೆತಿರುವುದು ವಿಶೇಷ. ಇದು ಕೃಷ್ಣಯಜುರ್ವೇದಕ್ಕೆ ಸೇರಿದೆ. ಸೂತ್ರಕಾಲದ ಸಮಾಜ ಮತ್ತು ಸಂಸ್ಕೃತಿಯನ್ನು ತಿಳಿದುಕೊಳ್ಳಲು ಕಲ್ಪಸೂತ್ರಗಳು ಅತ್ಯಂತ ಸಹಕಾರಿಯಾಗಿವೆ. ಆಪಸ್ತಂಬ ಧರ್ಮಸೂತ್ರವು ಆಪಸ್ತಂಬ ಕಲ್ಪದ 28 ಮತ್ತು 29ನೇ ಪ್ರಶ್ನೆಗಳಾಗಿವೆ.

ಸೂತ್ರಕಾಲದಲ್ಲಿ ಸಾಮಾಜಿಕ ಜನಜೀವನವು ಧರ್ಮದಿಂದ ಪ್ರಭಾವಿತಗೊಂಡಿತ್ತು. ಸಮಾಜದ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ರಾಜಕೀಯ, ಆಧ್ಯಾತ್ಮಿಕ, ಹೀಗೆ ಪ್ರತಿಯೊಂದು ಮುಖವೂ ಧರ್ಮಮಯವಾಗಿತ್ತು. ವ್ಯಕ್ತಿಯು ಪ್ರಾತಃಕಾಲ ಎದ್ದು ರಾತ್ರಿ ಮಲಗುವವರೆಗೂ ಅವನ ದೈನಂದಿನ ಕ್ರಿಯೆಗಳಾದ ಸ್ನಾನ, ಭೋಜನ, ಅಧ್ಯಯನ, ಅತಿಥಿಸತ್ಕಾರ, ಅಭಿವಾದನ ಹೀಗೆ ಎಲ್ಲವೂ ಧರ್ಮಮಯವೇ ಆಗಿ, ಭಾರತೀಯ ಜೀವನ ಪದ್ಧತಿಯೇ ಧರ್ಮದ ಚೌಕಟ್ಟಿನಲ್ಲಿ ಸೇರಿತ್ತು.

ಧರ್ಮಸೂತ್ರಗಳು ಕೇವಲ ಮತೀಯ ಗ್ರಂಥಗಳಲ್ಲ. ಇದನ್ನು ಧಾರ್ಮಿಕ ಗ್ರಂಥ, ತಂತ್ರ, ಆಗಮ ಇತ್ಯಾದಿ ಯಾವುದೇ ಹೆಸರಿನಿಂದ ಕರೆದರೂ ಅದರ ಅರ್ಥವ್ಯಾಪ್ತಿಯು ಸಂಕುಚಿತಗೊಳ್ಳುವುದು. ವಿಶೇಷವಾಗಿ ಇದು ಜೀವನಗ್ರಂಥ. ಜೀವನದಲ್ಲಿ ಇದು ಹೆಜ್ಜೆ ಹೆಜ್ಜೆಗೂ ಮಾನವನಿಗೆ ಮಾರ್ಗದರ್ಶನವನ್ನು ಮಾಡುವುದು. ಸತ್ವಯುತವಾದ ಹಾಗೂ ಶ್ರೇಷ್ಠವಾದ ಜೀವನ ಪದ್ಧತಿಯನ್ನು ಅನುಸರಿಸಲು ಧರ್ಮಸೂತ್ರಗಳು ಜೀವನಕ್ಕೆ ಬಂದು

ಲಕ್ಷ್ಯವನ್ನು ಕೊಟ್ಟು, ಅದನ್ನು ಹೊಂದಲು ಶ್ರೇಷ್ಠವಾದ ಹಾಗೂ ಯೋಗ್ಯವಾದ ಮಾರ್ಗವನ್ನೂ ಸೂಚಿಸುವುದು.

ಪರಿವರ್ತನಶೀಲವಾದ ಸಮಾಜಕ್ಕೆ ಕಾಲಕ್ಕೆ ತಕ್ಕಂತೆ ಸನ್ನಿವೇಶಕ್ಕನುಗುಣವಾಗಿ ಶ್ರೇಷ್ಠ ಸದ್ಗುಣಶೀಲ ಸಮಾಜ ನಿರ್ಮಾಣ ಮಾಡಬೇಕೆಂಬ ಹಂಬಲ ಸೂತ್ರಕಾರರಲ್ಲಿ ಎದ್ದು ಕಾಣುವುದು. ಋಷಿಗಳಿಂದ ನಿರ್ಮಿತವಾದ ಆಚಾರ ಸಂಹಿತೆಗಳೇ ಧರ್ಮಸೂತ್ರಗಳು. ಇವು ರಾಜ್ಯಾಂಗ ವಿಧಿಗಳಂತೆ ಇದ್ದು, ಕಾಲದಿಂದ ಕಾಲಕ್ಕೆ ಸಮಾಜ ಪರಿವರ್ತಿತವಾದಂತೆಲ್ಲಾ ಬದಲಾವಣೆಗಳನ್ನು ಹೊಂದಿದರೂ ಮೂಲಸ್ರೋತವಾದ ಧರ್ಮದ ಕಲ್ಪನೆಯಲ್ಲಿ ಮಾತ್ರ ಯಾವ ವ್ಯತ್ಯಾಸವೂ ಆಗಲಿಲ್ಲ. ಈ ಧರ್ಮವೇ ಎಲ್ಲರನ್ನೂ ಏಕಸೂತ್ರದಲ್ಲಿ ಪೋಣಿಸುವ ದಿವ್ಯ ಮಂತ್ರ. ಧರ್ಮಸೂತ್ರಗಳು ರಚನೆಯಾಗಿ ಸಾವಿರಾರು ವರ್ಷಗಳು ಕಳೆದಿದ್ದರೂ, ಧರ್ಮಸೂತ್ರದಲ್ಲಿ ಉಕ್ತವಾದ ಕೆಲವು ವಿಚಾರಗಳು ಇಂದಿಗೂ ಗ್ರಾಹ್ಯ ಮತ್ತು ಅನುಷ್ಠೇಯವಾದುದು. ಉದಾ: ಇಂದು ಆಚರಿಸುತ್ತಿರುವ ವಿವಾಹ ಕ್ರಮವು ಸೂತ್ರಗಳಲ್ಲಿ ನಿರ್ದೇಶಿಸಲ್ಪಟ್ಟಿರುವಂತೆ ಆಚರಿಸಲ್ಪಡುತ್ತಿದೆ. ಹಾಗೆಯೇ ವರ್ಣಾಶ್ರಮ ಧರ್ಮಗಳ ಹಿಂದೆ ಅಡಗಿರುವ ತತ್ವವು ಸರ್ವಕಾಲೀನವಾದುದು. ವ್ಯಕ್ತಿಯು ಸತ್ವಗುಣಸಂಪನ್ನನಾಗಬೇಕೆಂಬ ಅಭಿಪ್ರಾಯ ತ್ರಿಕಾಲ ಅಬಾಧಿತವಾದುದು.

ಈ ಪ್ರಕಾರವಾಗಿ ಧರ್ಮಸೂತ್ರಗಳು ವ್ಯಕ್ತಿಯ ಮತ್ತು ಸಮಾಜದ ಆಚಾರ ವಿಚಾರಗಳಿಗೆ, ರೀತಿ ರಿವಾಜುಗಳಿಗೆ, ನೈತಿಕ ನಡವಳಿಕೆಗೆ ಮಹತ್ವವನ್ನು ಕೊಟ್ಟಿದೆ. ಈ ದೃಷ್ಟಿಕೋನದಿಂದ ಆಪಸ್ತಂಬ ಧರ್ಮಸೂತ್ರದ ಅಧ್ಯಯನವನ್ನು ಮಾಡಲಾಗಿದೆ. ಈ ಅಧ್ಯಯನದಿಂದ ಧರ್ಮಸೂತ್ರ ಕಾಲದಲ್ಲಿದ್ದ ಸುವ್ಯವಸ್ಥಿತ ಸಮಾಜವನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವನ್ನೂ ಮಾಡಲಾಗಿದೆ. ಇದರ ಜ್ಞಾನವು ಬದುಕಿಗೆ ಸ್ಫೂರ್ತಿಯನ್ನು

ನೀಡುವುದರ ಜೊತೆಗೆ ಧಾರ್ಮಿಕ ಶ್ರದ್ಧೆ, ನಂಬಿಕೆ ಮತ್ತು ಶಕ್ತಿಯನ್ನೂ ಹೆಚ್ಚಿಸುವುದು. ಆಪಸ್ತಂಬ ಧರ್ಮಸೂತ್ರದ ಸವಿಮರ್ಶ ಸಮಗ್ರ ಅಧ್ಯಯನ-ವನ್ನು ಮಾಡುವಂತಹ ಸಂದರ್ಭದಲ್ಲಿ ಸನ್ನಿವೇಶಕ್ಕೆ ತಕ್ಕಂತೆ ಅನ್ಯಾನ್ಯ ಧರ್ಮ ಸೂತ್ರಕಾರರ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಇಂದಿನ ಸಾಮಾಜಿಕ ಸನ್ನಿವೇಶದ ದೃಷ್ಟಿಯಿಂದ ಅವುಗಳ ಪ್ರಸ್ತುತತೆಯನ್ನು ಚರ್ಚಿಸಲಾಗಿದೆ. ಕೇವಲ ಸಮರ್ಥನೆಗಾಗಿ ಅಲ್ಲಿರುವ ವಿಚಾರಗಳನ್ನು ಸಮರ್ಥಿಸಿಕೊಳ್ಳು-ವಂತಹ ಶುಷ್ಕ ಚರ್ಚೆಯನ್ನು ಮಾಡಿಲ್ಲ. ಇಂದಿನ ಸನ್ನಿವೇಶಕ್ಕೆ ಅನುಗುಣವಲ್ಲದಿದ್ದರೆ ಅದನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಲಾಗಿದೆ.

ಮೊದಲ ಅಧ್ಯಾಯದಲ್ಲಿ ವೇದಗಳು, ವೇದಾಂಗಗಳು, ಸೂತ್ರ ಸಾಹಿತ್ಯ ಇವುಗಳನ್ನು ಪೀಠಿಕಾರೂಪವಾಗಿ ಚರ್ಚಿಸಿ, ಧರ್ಮಸೂತ್ರ ಮತ್ತು ಧರ್ಮಶಾಸ್ತ್ರಗಳಿಗಿರುವ ವ್ಯತ್ಯಾಸವನ್ನು ತಿಳಿಸಲಾಗಿದೆ. ಪ್ರಕೃತ ಮಹಾಪ್ರಬಂಧದ ವಿಷಯವಾದ ಆಪಸ್ತಂಬ ಧರ್ಮಸೂತ್ರದ ದೇಶಕಾಲಾದಿಗಳ ಬಗ್ಗೆ ಶೋಧನೆಯು ಮಾಡಿಕೊಡಲಾಗಿದೆ.

ಎರಡನೆಯ ಅಧ್ಯಾಯವು ಧರ್ಮದ ವಿಸ್ತಾರವಾದ ವಿವರಣೆಗೆ ಮೀಸಲಾಗಿದ್ದರೆ ಮುಂದಿನ ಅಧ್ಯಾಯದಲ್ಲಿ ವರ್ಣಧರ್ಮವನ್ನು ಕುರಿತು ನಿರೂಪಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಆಶ್ರಮಗಳು, ಪುರುಷಾರ್ಥಗಳು, ಆಶ್ರಮಗಳ ತಾರತಮ್ಯತೆ ವಾನಪ್ರಸ್ಥ ಮತ್ತು ತುರೀಯ ಆಶ್ರಮಗಳನ್ನು ಕುರಿತು ವಿವರಿಸಲಾಗಿದೆ. ಐದನೆಯ ಅಧ್ಯಾಯದಲ್ಲಿ ಬ್ರಹ್ಮಚರ್ಯಾಶ್ರಮವನ್ನು ಕುರಿತು ಬ್ರಹ್ಮಚರ್ಯ ಬ್ರಹ್ಮಚಾರಿ ಧರ್ಮ, ಆಚಾರ್ಯ, ಗುರು-ಶಿಷ್ಯರ ಸಂಬಂಧ ವಿದ್ಯಾಭ್ಯಾಸಕ್ರಮ ಅನಧ್ಯಯನ ಮೊದಲಾದ ತಲೆಬರಹದಲ್ಲಿ ವಿಷಯ ನಿರೂಪಣೆ ಮಾಡಿ ಸ್ನಾತಕನ ಧರ್ಮವನ್ನೂ ವಿವರಿಸಲಾಗಿದೆ.

ಅಧ್ಯಾಯ ಆರು ಮತ್ತು ಏಳು ಗೃಹಸ್ಥಾಶ್ರಮಕ್ಕೆ ಮೀಸಲಾಗಿದ್ದು ಗೃಹಸ್ಥನ ವಿವಿಧ ಕರ್ತವ್ಯಗಳನ್ನು ವಿವರಿಸಲಾಗಿದೆ. ಇಲ್ಲಿ ಪ್ರಸ್ತುತಗೊಳಿಸಲ್ಪಟ್ಟ ಪ್ರಮುಖ ವಿಷಯಗಳು ಯಾವುವೆಂದರೆ ಪತಿಪತ್ನಿಯರ ಸಂಬಂಧ, ಪಂಚಮಹಾಯಜ್ಞ ಅತಿಥಿಸತ್ಕಾರ, ದಾನ, ಶ್ರಾದ್ಧ ಮೊದಲಾದವು.

ಎಂಟನೆಯ ಅಧ್ಯಾಯದಲ್ಲಿ ಆಪದ್ಧರ್ಮ ಮತ್ತು ಪ್ರಾಯಶ್ಚಿತ್ತಗಳನ್ನು ಕುರಿತು ತಿಳಿಸಿದರೆ ಒಂಭತ್ತನೆಯ ಅಧ್ಯಾಯವು ರಾಜಧರ್ಮಕ್ಕೆ ಮೀಸಲಾಗಿದೆ. ಇಲ್ಲಿ ರಾಜನ ಕರ್ತವ್ಯಗಳನ್ನು ಮತ್ತು ರಾಜ್ಯಾಂಗ ವ್ಯವಸ್ಥೆಯನ್ನು ಕುರಿತು ಮಾಹಿತಿಗಳನ್ನು ಸಂಗ್ರಹಿಸಲು ಯತ್ನಿಸಲಾಗಿದೆ.

ಧರ್ಮಸೂತ್ರದಲ್ಲಿ ನಿರೂಪಿಸಲ್ಪಟ್ಟಂತೆ ಸ್ತ್ರೀ ಮತ್ತು ಕುಟುಂಬ ಜೀವನ ಹತ್ತನೆಯ ಅಧ್ಯಾಯದ ವಿಷಯವಾಗಿದೆ. ಹನ್ನೊಂದನೆಯ ಅಧ್ಯಾಯವು ಮತಧರ್ಮ ಮತ್ತು ಆತ್ಮಧರ್ಮವನ್ನು ಕುರಿತದ್ದಾಗಿದೆ.

ಹನ್ನೆರಡನೆಯ ಅಧ್ಯಾಯದಲ್ಲಿ ಆಪಸ್ತಂಬ ಧರ್ಮಸೂತ್ರದ ಪ್ರಸ್ತುತತೆಯನ್ನು ಕುರಿತು ವಿಶದವಾಗಿ ಚರ್ಚಿಸಿ, ಧರ್ಮಸೂತ್ರವು ಜೀವನಕ್ಕೆ ಮಾರ್ಗದರ್ಶಕ ಮತ್ತು ಭವಿಷ್ಯತ್ತಿಗೆ ದಾರಿದೀಪವಾಗಿದೆ ಎಂಬುದನ್ನು ತೋರಿಸಲಾಗಿದೆ. ಕೊನೆಯಲ್ಲಿ ಉಪಸಂಹಾರದ ರೂಪದಲ್ಲಿ ಧರ್ಮಸೂತ್ರವು ಕೇವಲ ಮತೀಯ ಅಥವಾ ಧಾರ್ಮಿಕ ಗ್ರಂಥವಲ್ಲ, ಇದೊಂದು ಜೀವನ ಗ್ರಂಥ ಎಂಬುದನ್ನು ಸ್ಪಷ್ಟ ಪಡಿಸಲಾಗಿದೆ. ಹೀಗೆ ಆಪಸ್ತಂಬ ಧರ್ಮಸೂತ್ರದಲ್ಲಿ ನಿರೂಪಿತವಾಗಿರುವ ಸಮಾಜದ ಎಲ್ಲ ಮುಖಗಳನ್ನೂ ವಿಸ್ತಾರವಾಗಿ ಅಧ್ಯಯನ ಮಾಡಲಾಗಿದೆ.

ಆಪಸ್ತಂಬರ ಪ್ರಕಾರ ಜೀವನದ ಮುಖ್ಯ ಗುರಿಯೇ ಆತ್ಮಲಾಭ ಪ್ರತಿಯೊಬ್ಬರೂ ತಮ್ಮ ತಮ್ಮ ವರ್ಣಾಶ್ರಮ ಧರ್ಮಗಳನ್ನು ಪಾಲಿಸುವುದರ ಮೂಲಕ ಆತ್ಮಲಾಭವನ್ನು ಪಡೆಯಬಹುದು.

# ಸಂಕೇತ ಸೂಚಿ

| | | | |
|---|---|---|---|
| ಅಥ. ವೇ. | ಅಥರ್ವವೇದ. | ಪರಾ. ಸ್ಮೃ. | ಪರಾಶರಸ್ಮೃತಿ |
| ಅಭಿ. ಶಾ. | ಅಭಿಜ್ಞಾನ ಶಾಕುಂತಲ. | ಪಾ. ಗೃ. ಸೂ. | ಪಾರಸ್ಕರ ಗೃಹ್ಯ ಸೂತ್ರ. |
| ಆ. ಗೃ. ಸೂ. | ಆಪಸ್ತಂಬ ಗೃಹ್ಯ ಸೂತ್ರ. | ಪೂ. ಮೀ. | ಪೂರ್ವ ಮೀಮಾಂಸ. |
| ಆ. ಧ. ಸೂ. | ಆಪಸ್ತಂಬ ಧರ್ಮ ಸೂತ್ರ. | ಬೃ. ಉ. | ಬೃಹದಾರಣ್ಯಕ ಉಪನಿಷತ್. |
| ಆ. ಶ್ರೌ. ಸೂ. | ಆಪಸ್ತಂಬ ಶ್ರೌತ ಸೂತ್ರ. | ಬೋ. ಗೃ. ಸೂ. | ಬೋಧಾಯನ ಗೃಹ್ಯ ಸೂತ್ರ. |
| ಆಶ್ವ. ಗೃ. ಸೂ. | ಆಶ್ವಲಾಯನ ಗೃಹ್ಯ ಸೂತ್ರ. | ಬೋ. ಧ. ಸೂ. | ಬೋಧಾಯನ ಧರ್ಮ ಸೂತ್ರ. |
| ಉಜ್ವಲಾ | ಆ. ಧ. ಸೂ. ಹರದತ್ತಕೃತ ವೃತ್ತಿ. | ಭ. ಗೀ. | ಭಗವದ್ಗೀತೆ. |
| ಉ. ರಾ. ಚ. | ಉತ್ತರ ರಾಮ ಚರಿತ. | ಭಾ. ಗೃ. ಸೂ. | ಭಾರದ್ವಾಜ ಗೃಹ್ಯ ಸೂತ್ರ. |
| ಋ. ವೇ. | ಋಗ್ವೇದ | ಮನು. | ಮನುಸ್ಮೃತಿ. |
| ಐ. ಬ್ರಾ. | ಐತರೇಯ ಬ್ರಾಹ್ಮಣ | ಮಹಾ. ಭಾ. | ಮಹಾಭಾರತ. |
| ಕಾ. ಗೃ. | ಕಾಠಕ ಗೃಹ್ಯ ಸೂತ್ರ. | ಕೃ. ಯ. ವೇ.<br>ಯ. ವೇ. | ಯಜುರ್ವೇದ |
| ಗೌತಮ, ಗೌ. ಧ. ಸೂ. | ಗೌತಮ ಧರ್ಮಸೂತ್ರ. | ಯಾಜ್ಞ. | ಯಾಜ್ಞವಲ್ಕ್ಯ ಸ್ಮೃತಿ. |
| ಛಾಂ. ಉ. | ಛಾಂದೋಗ್ಯ ಉಪನಿಷತ್. | ವಾಜ. ಸಂ. | ವಾಜಸನೇಯಿ ಸಂಹಿತಾ. |
| ತೈ. ಆ. | ತೈತ್ತಿರೀಯ ಆರಣ್ಯಕ. | ವಾ. ಧ. ಸೂ.<br>ವಾಸಿಷ್ಠ. | ವಾಸಿಷ್ಠ ಧರ್ಮ ಸೂತ್ರ. |
| ತೈ. ಉ. | ತೈತ್ತಿರೀಯ ಉಪನಿಷತ್. | ವೈ. ಧ. ಸೂ.<br>ವೈಖಾನಸ | ವೈಖಾನಸ ಧರ್ಮ ಸೂತ್ರ |
| ತೈ. ಬ್ರಾ. | ತೈತ್ತಿರೀಯ ಬ್ರಾಹ್ಮಣ. | ಶತ. ಬ್ರಾ.<br>ಶತಪಥ | ಶತಪಥ ಬ್ರಾಹ್ಮಣ. |
| ತೈ. ಸಂ. | ತೈತ್ತಿರೀಯ ಸಂಹಿತಾ | ಶ್ವೇತಾ. ಉ. | ಶ್ವೇತಾಶ್ವತರ ಉಪನಿಷತ್. |
| ಧ. ಶಾ. ಇ. | ಧರ್ಮಶಾಸ್ತ್ರದ ಇತಿಹಾಸ. | ಸ್ಮೃತಿ ಚಂ. | ಸ್ಮೃತಿ ಚಂದ್ರಿಕಾ. |

| | |
|---|---|
| H.A.S.L. | History of Ancient Sanskrit Literature. |
| H.D.S. | History of Dharma Sastra. |
| H.IL. | History of Indian Literature. |
| H.S.L. | History of Sanskrit Literature. |
| SBE. | Sacred Book of the East Series. |